ವರ್ಷಗಳವರೆಗೂ ಬದುಕುತ್ತದಂತೆ? ನಾನು ಮನುಷ್ಯನಲ್ಲ ನಾನು ಆಮೆ. ನಾನು ಆಮೆ. ಎಂದು ಜಪಿಸಿ, ಹೊಸ ತಪಸ್ಸಿನ ಪರಿಣಾಮದ ಆಘಾತಕ್ಕೆ ಒಳಗಾಗಿ ಎರಡು ಕಾಲಿನ ನಿಲುವಿನ ಸಮತೋಲ ತಪ್ಪಿ, ಮುಗ್ಗರಿಸಿ ಕೊಳದೊಳಕ್ಕೆ ದುಡುಂ ಎಂದು ಬಿದ್ದ. ಈಗ ಕೊಳದ ಅಂಗಳದಲ್ಲಿ ಎರಡು ಆಮೆಗಳು, ಹೊಸದಾಗಿ ಬಂದ ಆಮೆ ಹಳೇ ಆಮೆಯನ್ನು ಕೇಳಿತು 'ನಿನಗೆಷ್ಟು ವರ್ಷ?' ಹಳೇ ಆಮೆ ಹೇಳಿತು 'ಸುಮಾರು 400 ವರ್ಷಗಳಿರಬಹುದು'– ಎಂದು ಉತ್ತರ ಕೊಟ್ಟಿತು. ಹೊಸ ಆಮೆ ಗಹಗಹಿಸಿ ನಗುತ್ತ 'ಹಾಗಾದರೆ ನಿನಗಿನ್ನು ಉಳಿದಿರುವುದು ನೂರೇ ವರ್ಷ! ನಾನು! ಈಗ ತಾನೇ ಆಮೆಯಾದವನು. ನನಗಿನ್ನೂ ಐದುನೂರು ವರ್ಷ ಪೂರ್ಣ ಬದುಕು. ಇನ್ನು ನೂರು ವರ್ಷಗಳ ನಂತರ ಇಡೀ ಕೊಳಕ್ಕೆ ನಾನೇ ಚಕ್ರಾಧಿಪತಿ' ಎಂದು ಕೇಕೆ ಹಾಕಿತು. ಹಳೆಯ ಆಮೆ, ಕ್ಷಣ ಮೌನದ ನಂತರ 'ಆಮೇಲೆ ನಿನ್ನ ಆಯಸ್ಸು ಮುಗಿಯುವುದಲ್ಲವೇ?' ಎಂದು ಗಂಭೀರವಾಗಿ ಪ್ರಶ್ನಿಸಿತು. ಹೊಸ ಆಮೆಗೆ ನೀರೊಳಗಿದ್ದೂ ಮೈ ಬೆವರಿತು. 'ಹಾಗಾದರೆ ಆಮೆಗಿಂತ ಹೆಚ್ಚಿನ ಆಯಸ್ಸುಳ್ಳ ಪ್ರಾಣಿ ಯಾವುದು ಹೇಳು? ನಾನೀಗಲೇ ಅದಾಗಿ ಬಿಡುತ್ತೇನೆ. ನನಗೆ ಆ ತಪೋರಹಸ್ಯ ಕರತಗವಾಗಿದೆ' ಎಂದು ತವಕದಿಂದ ಕೇಳಿತು. ಹಳೆಯ ಆಮೆ ಹೇಳಿತು, 'ಹಿಂದೆ ಬಕದಾಲಭ್ಯನೆಂಬ ಮಹರ್ಷಿ ಇದ್ದನಂತೆ. ಅವನು ಬ್ರಹ್ಮನ ಇಪ್ಪತ್ತು ಹಗಲು, ಇಪ್ಪತ್ತು ರಾತ್ರಿಗಳಷ್ಟು ದೀರ್ಘಕಾಲ ಬದುಕಿದ್ದನಂತೆ.' 'ಬ್ರಹ್ಮನ ಒಂದು ದಿನವೆಂದರೆ ಎಷ್ಟು ವರ್ಷಗಳು!?' 'ಆ ಕೋಷ್ಟಕ ಹೀಗಿದೆ ನೋಡು. ನಮ್ಮ ಒಂದು ವರ್ಷ ದೇವತೆಗಳ ಒಂದು ಅಹೋರಾತ್ರಕ್ಕೆ ಸಮ. ಇಂತಹ ದೇವಮಾನದ 12,000 ವರ್ಷಗಳಾದರೆ ಒಂದು ನಮ್ಮ ಚತುರ್ಯುಗ ಚಕ್ರ ಮುಗಿದಂತೆ. ಎಂದರೆ ನಮ್ಮ ಲೆಕ್ಕಾಚಾರದಲ್ಲಿ 43,20,000 ವರ್ಷಗಳು ಕಳೆದಂತೆ. ಇಂಥ 1,000 ಚತುರ್ಯುಗ ಚಕ್ರ ಕಳೆದಾಗ ಬ್ರಹ್ಮನ ಅರ್ಧದಿನ. ಬ್ರಹ್ಮನ ಒಂದು ಸಂಪೂರ್ಣ ದಿನದ ಅವಧಿ 864 ಕೋಟಿ, 10 ಲಕ್ಷ 10 ಸಾವಿರ ವರ್ಷಗಳು. ಬ್ರಹ್ಮನ ಇಂಥ ನೂರು ವರ್ಷಗಳಿಗೆ ಒಂದು ಪರ ಎಂಬ ಹೆಸರಿದೆ. ಆ ನಂತರವೂ ಬ್ರಹ್ಮ ಇರುತ್ತಾನೆ.'

ಕಕ್ಕಾಬಿಕ್ಕಿಯಾದ ನಮ್ಮ ಹೊಸ ಆಮೆ ಸ್ವಲ್ಪ ಯೋಚಿಸಿ, 'ಹೌದು, ನಾನು ಬಕದಾಲಭ್ಯನಂತಹ ಕ್ಷುದ್ರ ಮಹರ್ಷಿಯ ಕ್ಷಣಿಕ ಆಯಸ್ಸನ್ನು ಯಾಕೆ ಬಯಸಬೇಕು? ಅವನಿಗಿಂತ ಬೃಹತ್ತಾದ ಬ್ರಹ್ಮನೇ ಏಕೆ ಆಗಬಾರದು?' ಎಂಬ ಎಂಬ ವಿವಂಚನೆಯಲ್ಲಿ ಬಿದ್ದಿತು. ಆಯಿತು.

ಚಿಂತನೆ ತಪಸ್ಸಿನ, ತಪಸ್ಸು ಸೃಷ್ಟಿಯ ಪರಿಣಾಮದ, ಪರಿಣಾಮ ಅನುಭವದ, ಅನುಭವ ಬಯಕೆಯ, ಬಯಕೆ ಸಂಕಲ್ಪದ, ಸಂಕಲ್ಪ ಸಿದ್ಧಿಯ ಸಂತಾನವಾಗಿ, ಸ್ಫೋಟಗೊಂಡು ಉತ್ಕ್ರಾಂತ ಬ್ರಹ್ಮನೇ ಆದ ನಮ್ಮ ಆಮೆ ವಾಡಿಕೆಯಂತೆ ಯೋಗನಿದ್ರೆಯಲ್ಲಿದ್ದಾಗ, ಒಮ್ಮೆ ಏನೋ ಕನವರಿಸಿಕೊಂಡು ಹೊರಳಿ ಮಗ್ಗಲು ಬದಲಾಯಿಸಿತು. ಆಗ ಅದರ ಭಾರಕ್ಕೆ ಸಿಕ್ಕ ಒಬ್ಬ ದಾರ್ಶನಿಕ, ಒಂದು ಚಿಟ್ಟೆ, ಒಂದು ನಾಯಿ, ಒಂದು ಕುದುರೆ, ಒಂದು ಹಕ್ಕಿ, ಒಂದು ಬೆಕ್ಕು, ಒಂದು ಹಾವು, ಒಂದು ಹುಲಿ, ಒಂದು ಸಿಂಹ, ಒಂದು ಘೇಂಡಾಮೃಗ, ಒಂದು ಮೊಸಳೆ, ಒಂದು ಆನೆ, ಒಬ್ಬ ಮುದುಕ ಮತ್ತು ಒಂದು ಜೊತೆ ಆಮೆಗಳು ನಿಶ್ಯಬ್ದ ಸ್ಫೋಟದಲ್ಲಿ ಅಪ್ಪಚ್ಚಿಯಾದವು.

✽